ಕರ್ನಾಟಕ ವಿಧಾನ ಸಭೆ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	286 (379)
ಸದಸ್ಯರ ಹೆಸರು :	ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ:	15-09-2021
ಉತ್ತರಿಸಬೇಕಾದ ಸಚಿವರ ಹೆಸರು :	ಮಾನ್ಯ ಕಂದಾಯ ಸಚಿವರು

ಪ್ರಶ್ನೆ

ಅ) ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಕೈಗೊಂಡಿರುವ ಏತ ನೀರಾವರಿ ಯೋಜನೆಗಳಿಗಾಗಿ ಎಷ್ಟು ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; ಜಮೀನು ಕಳೆದುಕೊಂಡಿರುವ ಸಂತ್ರಸ್ಥರ ಹೆಸರು ಜಮೀನಿನ ಪ್ರಮಾಣ ಮತ್ತು ಊರಿನ ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು;

ಉತ್ತರ

ಕ್ರ ಸಂ.	ಯೋಜನೆಗಳ ವಿವರ	ಗ್ರಾಮಗಳ ಸಂಖ್ಯೆ	ವಿಸ್ತೀರ್ಣ (ಎಕರೆಗಳಲ್ಲಿ)	ಭೂಮಾಲೀಕರ ಸಂಖ್ಯೆ	ಷರಾ
1	ಕಾಚೇನಹಳ್ಳಿ ಏತ ನೀರಾವರಿ ಯೋಜನೆ	23	130-13½	280	ಈ ಯೋಜನೆಗಾಗಿ ಒಟ್ಟು ರೂ.88,71,399.06/- ಗಳನ್ನು ಪಾವತಿಸಲಾಗಿದೆ.
		6	14-21	63	ಅವಾರ್ಡ್ ತಯಾರಿಕಾ ಹಂತದಲ್ಲಿರುತ್ತದೆ
		19	55-17¼	197	ನೇರ ಖರೀದಿಗಾಗಿ ನೊಂದಣಿ ಪ್ರಕ್ರಿಯೆ ಪ್ರಗತಿಯಲ್ಲಿದೆ.
2	ಚನ್ನರಾಯಪಟ್ಟಣ ಅಮಾನಿ ಕೆರೆಯಿಂದ ನೀರೆತ್ತಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆ	3	8-27	60	ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ.
		1	1-19	1	ನೇರ ಖರೀದಿ ಮೂಲಕ ಖರೀದಿಸಿ ರೂ. 1,02,58,879/- ಪರಿಹಾರ ಪಾವತಿಸಲಾಗಿದೆ
3	ನುಗ್ಗೆಹಳ್ಳಿ ಏತ ನೀರಾವರಿ ಯೋಜನೆ	13	48-21	262	ನೇರ ಖರೀದಿಗಾಗಿ ನೊಂದಣಿ ಪ್ರಕ್ರಿಯೆ ಪ್ರಗತಿಯಲ್ಲಿದೆ.
4	ಜನಿವಾರ ಕೆರೆ ಏತ ನೀರಾವರಿ	16	64-06	343	ನೇರ ಖರೀದಿಗಾಗಿ ನೊಂದಣಿ ಪ್ರಕ್ರಿಯೆ ಪ್ರಗತಿಯಲ್ಲಿದೆ.
5	ಬಾಗೂರು ನವಿಲೆ ಸುರಂಗ ಆಗಮನ ಏತ ನೀರಾವರಿ ಕಾಮಗಾರಿಗಾಗಿ	3	5-30 ½	37	ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ.
6	ಆಲಗೊಂಡನಹಳ್ಳಿ ಏತ ನೀರಾವರಿ ಯೋಜನೆ	3	6-39	73	ನೇರ ಖರೀದಿಗಾಗಿ ಪ್ರಕ್ರಿಯೆ ಪ್ರಗತಿಯಲ್ಲಿದೆ.
		8	24-04	245	ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ.
7	ಚನ್ನರಾಯಪಟ್ಟಣ ಅಮಾನಿಕೆರೆ ಏತ ನೀರಾವರಿ ಯೋಜನೆ	4	14-30	173	ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ.
8	ಹೇಮಾವತಿ ಕೆರೆ ತುಂಬಿಸುವ ಗುಡೇಹೊಸಹಳ್ಳಿ ಏತ ನೀರಾವರಿ ಯೋಜನೆ	3	8-34	52	ನೇರ ಖರೀದಿಗಾಗಿ ಪ್ರಕ್ರಿಯೆ ಪ್ರಗತಿಯಲ್ಲಿದೆ.
9	ಚನ್ನರಾಯಪಟ್ಟಣ-ಅರಸೀಕರೆ ತಾಲ್ಲೂಕುಗಳ ಕೆರೆ ತುಂಬಿಸುವ ಕಾಚೇನಹಳ್ಳಿ ಏತ ನೀರಾವರಿ 3 ನೇಹಂತದ ಗಂಡಿಸಿ ಶಾಖಾ ಕಾಲುವೆ ನಿರ್ಮಾಣಕ್ಕಾಗಿ	6	52-05½	242	ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ.
10	ಚನ್ನರಾಯಪಟ್ಟಣ ಅಮಾನಿ ಕೆರೆಯಿಂದ ನೀರೆತ್ತಿ 25 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ನುಗ್ಗೆಹಳ್ಳಿ ಹೋಬಳಿ ವಳಗೆರೆ ಸೋಮೆನಹಳ್ಳಿ ಗ್ರಾಮ	2	5-12½	28	ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ.
11	ಚನ್ನರಾಯಪಟ್ಟಣ ಹಾಗೂ ಅರಸೀಕರೆ ತಾಲ್ಲೂಕು ಕೆರೆ ತುಂಬಿಸುವ ಕಾಚೇನಹಳ್ಳಿ ಏತ ನೀರಾವರಿ 3 ನೇ ಹಂತದ ಗಂಡಿಸಿ ಶಾಖಾ ಕಾಲುವೆ ನಿರ್ಮಾಣ	6	68-37½	243	ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ.

ಆ)	ಈ ಯೋಜನೆಗಳಿಗಾಗಿ ಭೂಮಿ ಕಳೆದುಕೊಂಡ ರೈತರಿಗೆ ಸರ್ಕಾರದಿಂದ ಪರಿಹಾರ ನೀಡಲು ಕಂದಾಯ ಇಲಾಖೆಯು ಕೈಗೊಂಡಿರುವ ಕ್ರಮಗಳೇನು? ಕಂದಾಯ ಇಲಾಖೆಯ ವಿಳಂಬ ಧೋರಣೆಗಳಿಂದ ಭೂ ಸಂತ್ರಸ್ಥರಿಗೆ ಆಗುತ್ತಿರುವ ಅನಾನುಕೂಲಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾಚೇನಹಳ್ಳಿ ಏತ ನೀರಾವರಿ ಯೋಜನೆಗೆ ಈಗಾಗಲೇ ಸಂಪೂರ್ಣ ಪರಿಹಾರವನ್ನು ಪಾವತಿಸಲಾಗಿದೆ. ಉಳಿದ ಯೋಜನೆಗಳ ಭೂಸ್ವಾಧೀನ ಪ್ರಕ್ರಿಯೆ ಹಾಗೂ ನೇರ ಖರೀದಿಯ ಪ್ರಕ್ರಿಯೆಯು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, ಈ ಯೋಜನೆಗಳಿಗೆ ಜಲಸಂಪನ್ಮೂಲ ಇಲಾಖೆಯಿಂದ ಭೂ-ಪರಿಹಾರವನ್ನು ಪಾವತಿಸಲಾಗುತ್ತಿದ್ದು, ಸ್ವಾಧೀನ ಪ್ರಕ್ರಿಯೆಯನ್ನು ಹಂತ-ಹಂತವಾಗಿ ಪೂರ್ಣಗೊಳಿಸಿ ಪರಿಹಾರ ಪಾವತಿಸಲಾಗುವುದು.
ಇ)	ಬಂದಿದ್ದಲ್ಲಿ, ಈ ಯೋಜನೆಗಳ ಭೂ ಸಂತ್ರಸ್ಥರಿಗೆ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಮತ್ತು ಎಷ್ಟು ಸಂತ್ರಸ್ಥರಿಗೆ ಪರಿಹಾರ ನೀಡಲಾಗಿದೆ; ಪರಿಹಾರ ನೀಡಿರುವ ಮೊತ್ತವೆಷ್ಟು; (ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳೊಂದಿಗೆ ಮಾಹಿತಿ ನೀಡುವುದು;)	ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನ ಮತ್ತು ಪರಿಹಾರ ಪಾವತಿಸಿದ ಮೊತ್ತದ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.
ಈ)	ಈ ಯೋಜನೆಗಳಡಿ ಇದುವರೆಗೂ ಪರಿಹಾರ ಪಡೆಯದ ಭೂ ಸಂತ್ರಸ್ಥರ ಹೆಸರು, ಪರಿಹಾರದ ಮೊತ್ತ ಮತ್ತು ಊರಿನ ವಿವರಗಳನ್ನು ನೀಡುವುದು; ಇವರಿಗೆ ಪರಿಹಾರ ನೀಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು; ಮತ್ತು ಯಾವ ಕಾಲ ಮಿತಿಯೊಳಗೆ ಪರಿಹಾರ ನೀಡಲು ಕ್ರಮ ವಹಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಭೂ ಮಾಲೀಕರಿಗೆ ಪರಿಹಾರ ನೀಡುವ ಸಂಬಂಧ ತಕರಾರು, ಪೌತಿ ಖಾತೆ ಬದಲಾವಣೆ, ಜಮೀನಿನ ಹಕ್ಕಿನ ಬಗ್ಗೆ ಸಿವಿಲ್ ನ್ಯಾಯಾಲಯಗಳಲ್ಲಿರುವ ಪ್ರಕರಣಗಳು, ಜಂಟಿ ಖಾತೆದಾರರ ಪೋಡಿಯಾಗದೇ ಉಳಿದಿರುವ ಸರ್ವೆ ನಂಬರ್‌ಗಳ ಜಮೀನು ಮತ್ತು ಪರಿಹಾರ ಪಡೆಯಲು ಅಗತ್ಯ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಭೂಮಾಲೀಕರಿಗೆ ಪರಿಹಾರ ಪಾವತಿಸಲು ವಿಳಂಬವಾಗುತ್ತಿದ್ದು, ಸದರಿ ಸಮಸ್ಯೆಗಳನ್ನು ಬಗೆಹರಿಸಿ ಪರಿಹಾರ ಪಾವತಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಕಂಇ 16 ಭೂಸ್ವಾಹಾ 2021

(ಆರ್.ಅಶೋಕ್)

ಕಂದಾಯ ಸಚಿವರು